RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೨೯ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎ.ಎ. ಸುಬ್ಬರಕಯ್ಯರು [ಬಿಡಿ ಪ್ರತಿ 3 ಪೈ

10—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಡಾ. ರಾಧಾಕಷ್ಣನ್‌ರವರಿಗೆ ಭಾರತದ ಅಧಕ ಪದವಿ ?

ಲ್ಣಿ ಶೆಲ್ಫ

ಕಾಂಗ್ರೆಸು ಪಕ್ಷದ ಪರವಾಗಿ ಭಾರತ ಗಣರಾಜ್ಯದ ಅಧ್ಯಕ್ಷ ಪದವಿಗೆ ಅಧ್ಯಕ್ಷನನ್ನು ಸೂಚಿಸುವ ಕುರಿತು ಮುಂದಿನ ತಿಂಗಳ ಪೂರ್ವಭಾವಿ ಸಿದ್ಧತೆಗಳು ಇದ್ದಾಗ್ಯೂ, ಆ ಸ್ಥಾನಕ್ಕೆ ಈಗ ಉಪಾಧ್ಯಕ್ಷರಾಗಿರುವ ಡಾ|| ಎಸ್ ರಾಧಾಕೃಷ್ಣನ್ ಸೂಚಿತರಾಗಬಹುದೆಂದು ನಮ್ಮ ದೆಹಲಿಯಲ್ಲಿ ಕೇಳಿಬರುತ್ತಿದೆ ಡಾ|| ರಾಧಾಕೃಷ್ಣನ್‌ರು ಅಧ್ಯಕ್ಷರಾಗುವದನ್ನು ಕಾಂಗ್ರೆಸು ಪಕ್ಷ ಬೆಂಬಲಿಸುವದಾಗಿ ಶ್ರೀ|| ನೆಹರು ತಮಗೆ ತಿಳಿಸಿರುವದಾಗಿ ಎಂಡು ಬಾರಿ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದ ರೊಹ್ತಾತಾಕಿನ ಲಾಯರು ಶ್ರೀ ಹರೀರಾಂ ತಿಳಿಸಿದ್ದಾರೆ ಭಾರತದ ಉಪಾಧ್ಯಕ್ಷ ಪದವಿಗೆ ಈ ಮುಂದು ಹೆಸರುಗಳು ಕೇಳಿಬರುತ್ತಿವೆ — ಡಾ|| ಜಾಕೀರ್ ಹುಸೇನ್, ಶ್ರೀ ಶ್ರೀಪ್ರಕಾಶ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

ನಾಯಕರ ಶರಣಾಗತಿ

ಗಡಿಯಾಚೆಯಿಂದ ನೇಪಾಳ ಪ್ರದೇಶದ ಮೇಲೆ ಮೊದಲನೆ ದಾಳಿ ಖಟ್ಮಂಡುವಿನಲ್ಲಿ ವಂದಿಗಾಗಿದೆ. ಒಂಡುಕೋರರು ಜಂಗ್ಪೇಪುರ ಠಾಣ್ಯದ ಮೇಲೆ ದಾಳಿ ಮಾಡಿದರು ಪೋಲೀಸರೊಡನೆ ಆದ ಕಾಳಗದಲ್ಲಿ ಬಂಡುಕೋರರಿಗೆ ಹಾನಿಯಾಗಿವೆ ಬಂಡುಕೋರರ ನಾಯಕ ದಾಮಾಂ' ಸಿಂಗ್ ಗುರುಂಗ್' ಪೋಲೀಸರಿಗೆ ತಿಳಿದಿದೆ.

ಹೈಕಮಾಂಡ್ ಗಮನಕ್ಕೆ ಬಂತು

ನವ ದೆಹಲಿಯಲ್ಲಿ ನಿನ್ನೆ ಸಮಾವೇಶವಾಗಿದ್ದ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಮೈಸೂರು ಹಾಗೂ ಬಿಹಾರು ಶಾಸನ, ಸಭೆ ಕಾಂಗ್ರೆಸು ಪಕ್ಷಗಳಲ್ಲಿ ಭಿನ್ನಾಪಾಯಗಳಿರುವದನ್ನು ಗಮನಕ್ಕೆ ತೆಗೆದುಕೊಂಡಿತು

ಸ್ವತಂತ್ರ ಪಕ್ಷಕ್ಕೆ ಆಣೆ

ಕಾಂಗ್ರೆಸಿನ ಲೋಕ ಸಭೆ ಸದಸ್ಯ ಶ್ರೀ ಎಂ ಎಸ್ ಆಣೆ ಹೊಸ ಲೋಕ ಸಭೆಯಲ್ಲಿ ಸ್ವತಂತ್ರ ಪಕ್ಷಕ್ಕೆ ಸೇರುವರೆಂದು ನಿನ್ನೆ ಶ್ರೀ ಸಿ ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ತಿಳಿಸಿದರು.

★

ಪರ್ಶ್ವೀದಖಾದಲ್ಲಿ ಭಾಗವಹಿಸುವದೆಂದರೆ ರಾಜಕೀಯ ಬಿಟ್ಟಂತೆ ಅಲ್ಲ ನಾನು ಅಧಿಕಾಂ ಬಿಟ್ಟಿದ್ದೇನೆ, ರಾಜಕೀಯ ಬಿಟ್ಟಿಲ್ಲ ಎಂದು ಶ್ರೀ ಜಯಪ್ರಕಾಶ ನಾರಾಯಣರು ನಿನ್ನೆ ಜಬ್ಬಲ್ಪುರದಲ್ಲಿ ನುಡಿದರು.

ಕ್ರಿಸ್ತಪೂರ್ವ 1750 ರ ಸುಮಾರಿನ ಮಧ್ಯ ಲೋಹ ಯುಗದ ಪ್ರಾಚೀನ ರುದ್ರಭೂಮಿ ಜರೂಸಲೇಂನ ಎಲ್-ಜೀಬ್‌ನಲ್ಲಿ ಪತ್ತೆ ಆಗಿದೆ.

ಕೇರಳ ಕಣಕಾಸಿನ ಮಂತ್ರಿ ಶ್ರೀ ಆರ್ ಶಂಕರರು ತಿರುವೇಂದ್ರಂನಲ್ಲಿ ಸಮಾವೇಶವಾಗಿರುವ ವಿಧಾನ ಸಭೆಯಲ್ಲಿ ರೂ 9 ಲಕ್ಷದ ಉಳುವರಿ ಅಂದಾಜು ಪಟ್ಟಿ ಮಂಡಿಸಿದರು ಹೊಸ ತೆರಿಗೆಗಳನ್ನು ವಿಧಿಸಿಲ್ಲ

ಸಂಶೋಧನಾ ತಂಡದ ನಾಯಕರಾದ ಬಿ ಸಿ ಮೊಲಿರ್ಸ್‌ರು, ಟಾಸ್ಮೇನಿಯಾದ ಪಶ್ಚಿಮ ತೀರದಲ್ಲಿ ಮೂಳೆಯಿಲ್ಲದ, ಕಣ್ಣಿಲ್ಲದ ರಾಕ್ಷಸ ಪತ್ತೆ ಆಗಿರುವದಾಗಿ ಟಾಸ್ಮೇನಿಯಾದಲ್ಲಿ ನುಡಿದರು

ವಿವಿಧ ವಾರ್ತೆಗಳು

ಮೈಸೂರಿನಲ್ಲಿ ಕಾಂಗ್ರೆಸಿನ ಮಂತ್ರಿಗಳು ಹಾಗೂ ಉನ್ನತ ನಾಯಕರು ಪರಾಭವಗೊಂಡಿರುವದು ಕಾಂಗ್ರೆಸಿನ ದುರಾಡಳಿತದ ವಿರುದ್ಧ ಜನತೆ ತನ್ನ ತೀರ್ಮಾನವನ್ನು ವ್ಯಕ್ತಮಾಡಿರುವದಾಗಿದೆ ಎಂದು ಬೆಂಗಳೂರಿನಲ್ಲಿ ನಿನ್ನೆ ಸೇರಿದ್ದ ಕರ್ನಾಟಕದ ಪ್ರಾಂತ ಕಮ್ಯೂನಿಸ್ಟ್ ಪಕ್ಷದ ಸಮಿತಿ ನಿರ್ಣಯಿಸಿದೆ

೦೦೦೦

ಪಕ್ಷದ ಅಧಿಕೃತ ಉಮೇದುವಾರರ ವಿರುದ್ಧ ಚುನಾವಣೆಯಲ್ಲಿ ಕೆಲಸ ಮಾಡಿದ ಕಾಂಗ್ರೆಸಿಗರ ಬಗ್ಗೆ ತನಿಖೆ ಮಾಡಲು ಸಮಿತಿ ರಚಿಸಲು ಬೆಂಗಳೂರಿನಲ್ಲಿ ನಿನ್ನೆ ಸೇರಿದ್ದ ಕಾಂಗ್ರೆಸು ಕಾರ್ಯಕಾರಿ ಸಮಿತಿ ಅಂಗೀಕರಿಸಿತು.

೦೦೦೦

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ಬೆಂಗಳೂರಿನಲ್ಲಿ ನಿನ್ನೆ ಸಮಾವೇಶವೊಂದರಲ್ಲಿ ಮಾತನಾಡುತ್ತಾ ಇನ್ನು ಕೆಲವೇ ತಿಂಗಳಲ್ಲಿ ನಮ್ಮ ದೇಶದ ನಾಯಕರಾದ ಶ್ರೀ ನಿಜಲಿಂಗಪ್ಪನವರು ನಮಗೆ ಮಾರ್ಗದರ್ಶನ ಮಾಡುವರು ಎಂದರು.

೦೦೦೦

1961 ನೆಯ ವರ್ಷದ ಕೊನೆಯ ವೇಳೆಗೆ ಅಲ್ಜೀರಿಯಾ ಹೋರಾಟದಲ್ಲಿ 1 ಲಕ್ಷ 41 ಸಾವಿರ ಮಂದಿ ಅಲ್ಜೀರಿಯಾ ರಾಷ್ಟ್ರೀಯರು ಮರಣ ಹೊಂದಿದರು ಹದಿನೇಳುಕಾಲು ಸಾವಿರ ಫ್ರೆಂಚು ಸೇನಿಕರು ಮಡಿದಿರುವರು

೦೦೦೦

ಆಂಧ್ರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹೂಡಿದ್ದ ಮುಷ್ಕರ ನಿಂತಿತೆಂದು ವಿಶಾಖಪಟ್ಟಣದ ವಾರ್ತೆ

ನವದೆಹಲಿ 9 — ಸಂಪೂರ್ಣವಾಗಿ ಸಜ್ಜುಗೊಂಡ, ಚಾಲಿತ ಕುಟುಂಬ ಯೋಜನಾ ಚಿಕಿತ್ಸಾಲಯವೊಂದನ್ನು ಸ್ವೀಡನ್ನಿನ ಮಹಿಳಾ ಸಂಘವು ಮಾರ್ಚ್ 6 ರಂದು ಭಾರತ ಸಂಕಾಂಕ್ಕೆ ಉಚಿತವಾಗಿ ಕೊಟ್ಟಿದೆ.

೦೦

ನವದೆಹಲಿ 8— ಕೇಂದ್ರಾಡಳಿತ ಪ್ರದೇಶವಾದ ದಾದ್ರ ಮತ್ತು ನಗರಹವೇಲಿಯಲ್ಲಿ 58000 ಜನರಿರುವರು ; ಅವರಲ್ಲಿ 29517 ಮಂದಿ ಪುರುಷರೂ 28415 ಮಂದಿ ಸ್ತ್ರೀಯರೂ ಇರುವರು.

TENDER NOTICE

Sealed Tenders for the supply of provisions etc , to the Palace during 1962-63 will be received by the undersigned on 12-3-1962 up to 3-00 P. M.

Details of the tender may be obtained from the Munib, Palace Mothikhana Department Mysore. The prescribed forms may be obtained from the Munib on payment of Re. 1/- each.

D. J. BALARAJ,
Secretary to
H.H the Maharaja of Mysore.

ನಾಳೆಯ ಹಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ವೈವಜ್ಞಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

11 ಷಷ್ಠಿ ಕೃತ್ತಿಕೆ

ರೈಲ್ವೆಗಳು

ನವದೆಹಲಿ 9— 1960-61 ರಲ್ಲಿ ಒಟ್ಟು 1616 ದಶಲಕ್ಷ ಜನರು ರೈಲುಗಳಲ್ಲಿ ಪ್ರಯಾಣ ಮಾಡಿದರು, ಈ ಪ್ರಯಾಣಿಕರು ಪ್ರಯಾಣ ಮಾಡಿದ ಒಟ್ಟು ದೂರದ ಅಂದಾಜು 78174 ದಶಲಕ್ಷ ಕಿಲೊಮೀಟರುಗಳು — ರೈಲುಗಳ ಮೂಲಕ ಸಾಗಿಸಲ್ಪಡಲು ಬಂದ ಸಾಮಾನು ಸರಂಜಾಮುಗಳ ಒಟ್ಟು ಪ್ರಮಾಣ 157 ದಶಲಕ್ಷ ಟನ್‌ಗಳು ; ಅವು ರವಾನೆಯಲ್ಪಟ್ಟ ದೂರದ ಒಟ್ಟು ಅಂದಾಜು 87800 ದಶಲಕ್ಷ ಕಿಲೋಮೀಟರುಗಳನ್ನೂ ಏರಾಯಿತ್ತದೆ — ರೈಲುಗಳ ಒಟ್ಟು ವರಮಾನದಲ್ಲಿ ರೈಲುಗಳ ಅಡಿಳಿತ ವೆಚ್ಚ ಶೇ 78-78 ಕ್ಕೆ ಇಳಿದಿರುವುದು ಕಂಡು ಬಂದಿದೆ : ಕಳೆದ ಎಂಟು ವರ್ಷಗಳಲ್ಲಿ ಅಡಳಿತ ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯಾಗಿರುವುದು ಇದೇ ವರ್ಷವೆನ್ನಬೇಕು — 1960-61 ರಲ್ಲಿ ದೊರೆತ ಹೆಚ್ಚಿನ ನಿವ್ವಳ ಉಳಿತಾಯದ ಒಲದ ಮೇಲೆ 1961 ರ ಒಲದ ಮೇಲೆ 1961 ರ ಏಪ್ರಿಲು 1 ರಂದು ಸರ್ಕಾರದಿಂದ ಹಿಂದೆ ಪಡೆದಿದ್ದ ತಾತ್ಕಾಲಿಕ ಸಾಲಗಳನ್ನು ತೀರಿಸಲು ಸಾಧ್ಯವಾಯಿತು — 60-61 ರೈಲ್ವೆಗಳಿಗೆ ಒಟ್ಟು 456-80 ಕೋಟಿ ರೂಗಳಷ್ಟು ವರಮಾನ ಬಂತು ; ಇದು ಅತ್ಯಧಿಕ ವರಮಾನದ ದಾಖಲೆ ಎನ್ನಬೇಕು — ರೈಲ್ವೆಗಳ ಅಡಳಿತದ ವೆಚ್ಚವು ಹಿಂದಿನ ವರ್ಷ 289-52 ಕೋಟಿ ರೂ. ಇದ್ದದ್ದು ಈ ವರ್ಷ 313-15 ಕೋಟಿ ರೂ. ಆಯಿತು — ಎಲ್ಲ ವೆಚ್ಚಗಳನ್ನೂ ಕಳೆದು ಕೊಂಡು ವರ್ಷದಲ್ಲಿ ಕೈಗೆ ಬಂದ ನಿವ್ವಳ ವರಮಾನ 87 8/ ಕೋಟಿ ರೂ ; ಈ ಪೈಕಿ 55-86 ಕೋಟಿ ರೂಗಳಷ್ಟು ಹಣವನ್ನು ಸರ್ಕಾರದ ಜನರಲ್ ರೆವಿನ್ಯೂ ಬಾಬಿಗೆ ಕೊಡಲಾಯಿತು — ರೈಲ್ವೇ ಪ್ರಯಾಣೀಕರ ಸೌಲಭ್ಯಗಳನ್ನು ಹೆಚ್ಚಿಸಲು 2-43 ಕೋಟಿ ರೂಗಳಷ್ಟು ಕಾಣವನ್ನು ವಿಚಾರ ಮಾಡಲಾಗಿದೆ — 1961 ರ ಮಾರ್ಚ್ 31 ರಂದು ರೈಲ್ವೆಗಳಲ್ಲಿ ನೌಕರರಾಗಿದ್ದವರ ಒಟ್ಟು ಸಂಖ್ಯೆ 11ಂ0714 ; ಇವರಿಗೆ ಕೊಡುವ ಸಂಬಳ ಸಾರಿಗೆ ಅಲೋಯನ್ಸ್ ಪ್ರಾವಿಡೆಂಟು ಫಂಡು ಚಂದಾ, ಗ್ರಾಜುಯಿಟಿ ಇವುಗಳೆಲ್ಲಾ ಸೇರಿ ಒಟ್ಟು 204-82 ಕೋಟಿ ರೂಗಳಷ್ಟು ಹಣ ವ್ಯಯವಾಗಿದೆ — ಇಲಾಖಾ ಮಟ್ಟದಲ್ಲಿ ನಡೆದ ಕಾಪೆಗಳ ಪರಿಣಾಮವಾಗಿ ಒಟ್ಟು 1152 ಲಂಚಪ್ರಕರಣಗಳು ಪತ್ತೆ, ಆದುವು ; ಸಂಬಂಧಪಟ್ಟವರು ಶಿಕ್ಷೆಗೆ ಒಳಗಾಗಿದ್ದಾರೆ; ಈ ಪೈಕಿ ಪುನಃ 218 ಜನರು ಕೆಲಸ ಕಳೆದುಕೊಂಡಿದ್ದಾರೆ.

ಮಹಾತ್ಮಾ ಗಾಂಧಿ ಪ್ರತಿಮೆ

ನವದೆಹಲಿ 9 — ಅರ್ಜಂಟೈನಾದ ಸುಪ್ರಸಿದ್ಧ ಶಿಲ್ಪಿ ಎಂ || ಅಂಟೋನಿಯೂ ಸಸ್ಸೊನಂರವರು ಮಹಾತ್ಮಾ ಗಾಂಧಿಯವರ ಪ್ರತಿಮೆಯೊಂದನ್ನು ಸಿದ್ಧಪಡಿಸಿ ಅದನ್ನು ಮಾರ್ಚಿ 6 ರಂದು ಬೂನೇಸ್ ಐರಿಸ್‌ನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಭಾರತೀಯ ರಾಯಭಾರಿಗೆ ಸಮರ್ಪಿಸಿದರು ; ಈ ಪ್ರತಿಮೆಯು ಬಣ್ಣ ಕಪ್ಪು ತೂಕ 50 ಕಿಲೋಗ್ರಾಂಗಳು, ಎತ್ತರ 2 ಅಡಿಗಳು : ಎಂ || ಅಂಟೋನಿಯವರು, ಅರ್ಜಂಟೈನಾದ ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿರುವ ಪ್ರಸಿದ್ಧ ಕಲಾವಿದರು.

ಮುನಿಸಿಪಲ್ ಕಮಿಷನರ್‌ರವರ

ಆಫೀಸು,

ಸಿಟಿ ಮುನಿಸಿಪಲ್ ಕೌನ್ಸಿಲ್,

ಮೈಸೂರು ತಾ || 5-3-62

R8. A. S. 4/61-62

ಸಂಕಿಪ್ತ ಪ್ರಕಟಣೆ

★

ಇದರಿಂದ ಸಮಸ್ತ ಜನಗಳಿಗೆ ತಿಳಿಯುವಂತೆ ಪಡಿಸುವುದೇನೆಂದರೆ : ಮೈಸೂರು ಸಿಟಿ ಮಂಡಿ ಮಾರ್ಕೆಟ್ಟಿನಲ್ಲಿ 1962-63 ನೇ ಸಾಲಿನಲ್ಲಿ ವ್ಯಾಪಾರಕ್ಕಾಗಿ ಬಂಡಿಕ್ಕ ಕರಕಾರಿ ಗೂಡೆ ವಗೈರೆಗಳ ಮೇಲೆ ವಿಧಾಯಕವಾದುದಾದಂತೆ 'ಡೈಲಿ ಫೀ'ವಸೂಲ್ಮಾಡುವ ಹಕ್ಕನ್ನು ತಾರೀಖು 12-3-1962 ನೇ ಸೋಮವಾರ ಬೆಳಿಗ್ಗೆ 11 ಘಂಟೆಗೆ ಮುನಿಸಿಪಲ್ ಕಮಿಷನರ್ ರವರಿಂದ ಮಂಡೀ ಮಾರ್ಕೆಟ್ ಆವರಣದಲ್ಲಿ ಬಹಿರಂಗವಾಗಿ ಹರಾಜು ಮೂಲಕ ವಿಲೇ ಮಾಡಲಾಗುತ್ತೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಹರಾಜು ನಿಬಂಧನೆಗಳಿಗೆ ಒಳಪಟ್ಟು ಛಡಸವಾಲು ಮೂಲಕ ಬಾಡಿಗೆಯನ್ನು ಪಡೆಯಬಹುದು.

ಹರಾಜು ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳನ್ನು ರೆವಿನ್ಯೂ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ತಿಳಿಯಬಹುದು.

(ಸಹಿ) B. S. ನಂಜುಂಡೆ ಗೌಡ

ಮುನಿಸಿಪಲ್ ಕಮಿಷನರ್

ವುಡ್‌ಲಾಂಡ್ಸ್ ಯಶಸ್ವಿ 5 ನೇ ವಾರ

ಈ ಮನಮೋಹಕ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

— Advertise in —

Sri 'SATYAVADI' Daily

Oldest Newspaper in the State ; Splendid Advertiser



— Astronaut John Glenn in Space Suit —

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.